## ಎರಡು ಹಿಂದಿ ಕಥೆಗಳು

ಕನ್ನಡಕ್ಕೆ:
**ಡಾ. ಎಚ್.ಎಂ. ಕುಮಾರಸ್ವಾಮಿ**



# ಇಳಿಹೊತ್ತಿನ ಸಂಗಾತಿ

■ ಮಾರ್ಟಿನ್ ಜಾನ್

ಸುಮಾರು ಮೂರು ವರ್ಷಗಳಿಂದ ಕಬ್ಬಿಣದ ಪಂಜರದ ಒಳಗೆ ಬಂಧಿಯಾಗಿದ್ದ ಆ ಗಿಳಿಯ ದೃಷ್ಟಿ ಪಂಜರದ ಬಾಗಿಲ ಕಡೆಗೆ ಬಿದ್ದಾಗ ಅದಕ್ಕೆ ನಂಬುವುದಕ್ಕೆ ಆಗಲಿಲ್ಲ. ಪಂಜರದ ಚಿಕ್ಕ ಬಾಗಿಲು ತೆರೆದಿತ್ತು.

ಗಿಳಿ ಕತ್ತು ಕೊಂಕಿಸಿ ಅತ್ತಿತ್ತ ಸುತ್ತಲೂ ನೋಡಿತು. ಅಕ್ಕಪಕ್ಕ ಯಾರೂ ಕಾಣಿಸಲಿಲ್ಲ. ಹಾಗಾದ್ರೆ ಬಾಗಿಲು ತೆರೆದಿದ್ದಾದರೂ ಹೇಗೆ? ಅದು ತಲೆಯನ್ನೊಮ್ಮೆ ಜಾಡಿಸಿ ಒದರಿತು. '...ಇದಕ್ಕಾಗಿ ನಾನೇಕೆ ತಲೆ ಕೆಡಿಸಿಕೊಳ್ಳಬೇಕು? ಬಾಗಿಲನ್ನು ಯಾರಾದ್ರೂ ತೆರೆಯಲಿ. ನಾನು ಮಾತ್ರ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಬೇಕು...'

ತನಗೆ ತಾನೇ ಹೀಗೆ ಹೇಳಿಕೊಂಡ ಗಿಳಿ ಮರುಕ್ಷಣದಲ್ಲಿಯೇ ಪಂಜರದಿಂದ ಹೊರಗೆ ಬಂದು ಕುಪ್ಪಳಿಸುತ್ತ ಹಾರಿ ಛಾವಣಿಯ ತುದಿಯಲ್ಲಿ ಕುಳಿತು ಆಚೀಚೆ ನೋಡಿತು. ಕಣ್ಣೆತ್ತಿ ಆಗಸವನ್ನು ನೋಡಿತು. ತೆರೆದ ನೀಲಾಕಾಶ ತನ್ನೆಡೆಗೆ ಆಮಂತ್ರಣ ನೀಡುತ್ತಿತ್ತು. ಗಿಳಿ ತನ್ನ ರೆಕ್ಕೆಗಳನ್ನು ಬಿಚ್ಚಿ ಬಡಿಯಿತು... ಒಂದು... ಎರಡು... ಮೂರು... ತನಗೆ ಆಕಾಶದೆತ್ತರಕ್ಕೆ ಹಾರುವ ಶಕ್ತಿ ಇದೆಯೇ ಎಂದು ಪರೀಕ್ಷಿಸಿಕೊಳ್ಳುವ ಹವಣಿಕೆಯಲ್ಲಿತ್ತು. ಮೂರು ವರ್ಷ ಪಂಜರದ ಕೈದಿಯಾಗಿದ್ದ ಅದಕ್ಕೆ ಈಗ ಅಚಾನಕ್ಕಾಗಿ ಹೊರಗೆ ಹಾರುವ ಅವಕಾಶ ಈಗ ಒದಗಿ ಬಂದಿತ್ತು. ತೆರೆದ ಆಗಸದ ಆಮಂತ್ರಣವನ್ನು ಸ್ವೀಕರಿಸುವ ಇಚ್ಛೆಯಿಂದ ಅದು ಹಾರಲನುವಾಗುತ್ತಿದ್ದಾಗ ಅದರ ದೃಷ್ಟಿ ತನ್ನ ಇಬ್ಬರು ಪಾಲಕರ ಮೇಲೆ ಬಿತ್ತು. ಆ ಇಬ್ಬರೂ ವೃದ್ಧರಾಗಿದ್ದರು. ಇಷ್ಟು ವಿಶಾಲವಾದ ಮನೆಯಲ್ಲಿ ಅವರಿಬ್ಬರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಆ ವೃದ್ಧ ಮನೆ ಎದುರಿನ ವಿಶಾಲವಾದ ಲಾನ್‌ನ ಮಧ್ಯೆ ಆರಾಮಕುರ್ಚಿಯಲ್ಲಿ ಕುಳಿತಿದ್ದ. ವೃದ್ಧೆ ಯಾವುದೋ ನೋವುನಿವಾರಕ ತೈಲವನ್ನು ಆತನ ಮಂಡಿಗಳಿಗೆ ಹಚ್ಚಿ ಮಾಲೀಶು ಮಾಡುತ್ತಿದ್ದಳು. ಆ ದೃಶ್ಯವನ್ನು ನೋಡಿದ ಗಿಳಿ ತನ್ನ ರೆಕ್ಕೆಗಳನ್ನು ಪುನಃ ಮಡಿಚಿತು. ಆ ಇಬ್ಬರನ್ನು ದಿಟ್ಟಿಸಿ ನೋಡುತ್ತ ಮೂರು ವರ್ಷಗಳ ಹಿಂದಿನ ಭೂತಕಾಲಕ್ಕೆ ಸರಿಯಿತು.

ಆಗ ಅದರ ವಯಸ್ಸು ಅಂದಾಜು ಮೂರು ತಿಂಗಳು ಇದ್ದಿರಬಹುದು. ರೆಕ್ಕೆ ಹೆಚ್ಚೂ ಕಡಿಮೆ ಮೂಡಿದ್ದವು. ಶರೀರವೂ ದಷ್ಟಪುಷ್ಟವಾಗಿತ್ತು. ಬಾಲ್ಯ ಮತ್ತು ಯೌವನದ ನಡುವಿನ ಹೊಸ್ತಿಲಲ್ಲಿ ಅದು ನಿಂತಿತ್ತು. ತಾಯಿಯ ಹಿಂದೆ ಹಿಂದೆ ಹಾರಲು ಅನುವಾಗುವ ಕಾಲವದು. ಆ ದಿನ ಬಂದೇಬಿಟ್ಟಿತು... ತಾಯಿಯ ಜೊತೆ ಜೊತೆಯಲ್ಲಿ ಹಿಂದೆ–ಮುಂದೆ ಹಾರುತ್ತ ಹೊರಟೇ ಬಿಟ್ಟಿತು. ಅದರ ಮೊದಲ ಹಾರಾಟ. ಅದರ ಖುಷಿಗೆ ಎಲ್ಲೆಯೇ ಇರಲಿಲ್ಲ. ಆಕಾಶ, ನದಿ, ಬೆಟ್ಟ–ಗುಡ್ಡ, ಕಾಡು... ಕೆಳಗೆ ಮನುಷ್ಯರ ಗುಂಪು... ಎಲ್ಲವನ್ನೂ ಮೊದಲ ಬಾರಿಗೆ ಕಾಣುವ, ಕಣ್ತುಂಬಿಕೊಳ್ಳುವ ಅವಕಾಶ. ತನ್ನದೇ ಖುಷಿ ಮತ್ತು ಗಮ್ಮತ್ತಿನಲ್ಲಿ ಆಚೀಚೆ ನೋಡುತ್ತ ಹಾರುತ್ತಿದ್ದ ಆ ಗಿಳಿಗೆ ಎದುರಿಂದ ಬಂದ ದೊಡ್ಡ ಗಿಡುಗ ಕಾಣಿಸಲೇ ಇಲ್ಲ.

ಗಿಡುಗ ಹಾರುತ್ತಲೇ ಗಿಳಿಗೆ ರೆಕ್ಕೆಯಿಂದ ಬಡಿದು ಅದನ್ನು ಕಾಲಲ್ಲಿ ಅವುಚಿಕೊಳ್ಳುತ್ತಲೇ ಪಕ್ಕದಲ್ಲೇ ಹಾರುತ್ತಿದ್ದ ತಾಯಿಗಿಳಿ ಆಕ್ರಂದನ ಮಾಡುತ್ತ ವೀರಾವೇಷದಿಂದ ಗಿಡುಗನ ಮೇಲೆರಗಿದಾಗ, ಗಿಡುಗ ಅಸಹಾಯಕವಾಗಿ ಗಿಳಿಮರಿಯನ್ನು ಕಾಲಿನಿಂದ ಉದುರಿಸಿತು. ಅದಾಗಲೇ ರೆಕ್ಕೆಗೆ ನೋವಾಗಿದ್ದ ಗಿಳಿ ಕೆಳಕ್ಕೆ ಉರುಳುತ್ತ ಉದ್ಯಾನವೊಂದರಲ್ಲಿ ಬಿದ್ದುಬಿಟ್ಟಿತ್ತು. ಚೀಂ... ಚೀಂ... ಎಂದು ಹೊರಳಾಡುತ್ತಿದ್ದ ಗಿಳಿಮರಿಯ ಆಕ್ರಂದನವನ್ನು ಅಲ್ಲಿಯೇ ತಿರುಗಾಡುತ್ತಿದ್ದ ಮನೆಯ ಮಾಲೀಕ ಸುದೇಶ್‌ಬಾಬು